ದ್ವಾರಕೀಶ್ ಊರ ಹೊರಗಿನ ಸರ್ಕಾರಿ ಪ್ರೌಢಶಾಲೆ ಕಡೆ ಹೆಜ್ಜೆ ಹಾಕಿದ. ದಾರಿಯಲ್ಲಿ ದ್ವಾರಕೀಶನ ಬೀದಿಯ ಖಾಸೀಮಜ್ಜ, ದುರುಗಪ್ಪ, ಬೂಬವ್ವ, ಕಾನ್ವೆಂಟಿನ ಚಿಂಟು ಎಲ್ಲರನ್ನೂ ನಗ್ತಾ ಮಾತಾಡಿಸುತ್ತಾ ಹೋದ. ಅವರನ್ನು ಮಾತನಾಡಿಸಿ ಮುಂದೆ ಹೋಗುವುದು ರೂಢಿ. ಶಾಲೆ ಮುಟ್ಟುವವರೆಗೂ ದ್ವಾರಕೀಶ್ ಕಂಡವರನ್ನು ನಗ್ತಾ ಮಾತನಾಡಿಸಿ ಹೋಗುತ್ತಿದ್ದ. ಇಂದು ಮಾತ್ರ ಅಪ್ಪನ ಬೇಸರ, ಮಳೆ ಇಲ್ಲದ್ದು, ಬೆಳೆ ಬರುತ್ತೋ ಇಲ್ಲವೋ, ಅಪ್ಪನ ಸಾಲ ಮುಂತಾದ ಚಿಂತೆಗಳೇ ಕಾಡುತ್ತಿದ್ದವು.

ಅಮ್ಮ ಶಾಲೆಗೆ ಹೊರಡುವಾಗಲೇ 'ಮನೆ ಕಡೆ ಧ್ಯಾನ ಬೇಡ, ನಮ್ಮ ಗೋಳು ನೋಡಬೇಡ ಚೆನ್ನಾಗಿ ಓದು. ಭೂಮಿತಾಯಿ ನಂಬಿದವರನ್ನು ಎಂದೂ ಕೈಬಿಟ್ಟಿಲ್ಲ ಇಂದಲ್ಲ ನಾಳೆ ಮಳೆ ಬಂದೇ ಬರುತ್ತೆ ಅಪ್ಪನ ಮುಖದಲ್ಲಿ ನಗು ನೋಡನಂತೆ ನೀ ಮಾತ್ರ ಮುಖ ಸಣ್ಣ ಮಾಡಿಕೊಳ್ಳ ಬೇಡ' ಅಂತ ತಲೆಗೆ ಕೊಬ್ಬರಿ ಎಣ್ಣೆ ಹಾಕಿ ತಲೆ ಬಾಚಿ ದ್ವಾರಕೀಶನ ಕೈಯಲ್ಲಿ ಎರಡು ರೂಪಾಯಿ ನಾಣ್ಯ ಕೊಟ್ಟು ಕಳಿಸಿದ್ದಳು. ದಿನಾ ಶಾಲೆ ಮುಂದೆ ಪೇರಳೆ, ನೇರಳೆ, ಶೇಂಗಾ ಮಾರಲು ವಯಸ್ಸಾದವರು ಬಂದು ಕೂರುತ್ತಾರೆ. ಅವರಿಂದ ದ್ವಾರಕೀಶ್ ಏನಾದರೂ ಕೊಂಡು ತಿನ್ನುತ್ತಿದ್ದ. ಇವತ್ತು ಮಾತ್ರ ಅಮ್ಮನ ಕೈಗೆ ಆ ನಾಣ್ಯ ವಾಪಸ್ ಕೊಟ್ಟು 'ಬಿಸಿ ಊಟ ಸಾಕಾಗುತ್ತೆ ಬಿಡಮ್ಮ' ಅಂದು ಬಂದಿದ್ದ.

ಶಾಲೆಯಲ್ಲಿ ಮೇಷ್ಟ್ರ ಮೇಡಮ್ಮರಾದಿಯಾಗಿ ದ್ವಾರಕೀಶ ಮೆಚ್ಚಿನ ಹುಡುಗ. ತರಗತಿ ಲೀಡರ್ ಆದ ಇವನ ಇತ್ತೀಚಿನ ಬೇಸರಕ್ಕೆ ಕಾರಣ ಕಂಡುಕೊಂಡ ಅವನ ಕ್ಲಾಸ್ ಟೀಚರ್ ಮಧುರ ಮಿಸ್ ಇಂದು ಇವನನ್ನೇ ಕೇಂದ್ರವಾಗಿರಿಸಿಕೊಂಡು ಒಂದು ವಿಷಯ ಹಂಚಿಕೊಂಡರು; ತರಗತಿಗೆ ಬರುವಾಗ ಒಂದಿಷ್ಟು ಏನೇನೋ ಪದಾರ್ಥಗಳನ್ನು ತಂದು 'ಇವತ್ತು ಪಾಠ ಬೇಡ, ಹೊಸ ಆಟ ಆಡನ' ಅಂದಾಗ ಎಲ್ಲ ಮಕ್ಕಳು ಹೊಯ್ ಅಂತ ಖುಷಿಯಿಂದ ಕೂಗಿದರು.

ಒಂದು ಪ್ಲಾಸ್ಟಿಕ್ ಕವರಿಂದ ಎರಡು ಹಿಡಿಯಷ್ಟು ಕೆಂಪು ಮಣ್ಣು ತೆಗೆದು ಟೇಬಲ್ ಮೇಲೆ ಸುರಿದು ಎರಡು ಭಾಗ ಮಾಡಿದರು. ಮತ್ತೊಂದು ಕವರಿಂದ ಒಂದು ಗುಲಾಬಿ ಕಡ್ಡಿ ಮತ್ತು ಕಳ್ಳಿ ಕಡ್ಡಿ ತೆಗೆದು ಅದರಲ್ಲೊಂದು, ಇದರಲ್ಲೊಂದು ಚುಚ್ಚಿದರು. ಒಬ್ಬ ಹುಡುಗಿಗೆ ಅವಳ ಬ್ಯಾಗಲ್ಲಿದ್ದ ನೀರಿನ ಬಾಟಲಿ ತರಿಸಿ ನಾಲ್ಕು ನಾಲ್ಕು ಹನಿ ಬುಡಕ್ಕೆ ಹಾಕಿದರು. ಮಕ್ಕಳೆಲ್ಲಾ ಟೇಬಲನ್ನೇ ನೋಡುತ್ತಿದ್ದರು, ದ್ವಾರಕೀಶ್ ಸಹ!

ಮಕ್ಕಳೇ, ನೋಡಿ ಮಣ್ಣು ಒಂದೇ ಸಸಿಗಳು ಬೇರೆ. ಇದು ನಾಳೆ ನಾಡಿದ್ದು ಅಥವಾ ಮುಂದಿನ ವಾರ ಚಿಗುರಿ ಒಂದು ಹೂ ಕೊಡುತ್ತೆ, ಮತ್ತೊಂದು ಬರಿ ಬೆಳೆಯುತ್ತೆ ಏನೂ ಕೊಡಲ್ಲ. ಇವೆರೆಡರಲ್ಲಿ ನೀವು ಯಾವುದನ್ನು ಇಷ್ಟ ಪಡ್ತೀರಿ? ಅಂದಾಗ ಮಕ್ಕಳು ಒಂದೇ ಕಂಠದಿಂದ 'ಗುಲಾಬಿ' ಅಂದರು ಜೋರಾಗಿ!

'ಕಳ್ಳಿಕಡ್ಡಿ ಯಾಕೆ ಬೇಡ?' ಅಂದರು ಮಧುರ ಮಿಸ್ ದ್ವಾರಕೀಶನ ನೋಡುತ್ತಾ.

'ಅದರಿಂದ ಉಪಯೋಗ ಇಲ್ಲ, ಗುಲಾಬಿ ಎಲ್ಲರಿಗೂ ಪ್ರಿಯ ಅದಕ್ಕೆ' ಅಂದ.

'ತಪ್ಪು' ಅಂದರು ಮಿಸ್.

ಇಡೀ ತರಗತಿ ಮೌನ!

'ಪ್ರಕೃತಿಯಲ್ಲಿ ಇರುವ ಎಲ್ಲಾ ವಸ್ತುಗಳು, ಜೀವಿಗಳು, ಸಸ್ಯಗಳು, ಸರೀಸೃಪಗಳು, ಪ್ರಾಣಿ–ಪಶು–ಪಕ್ಷಿಗಳು ಒಂದನ್ನೊಂದು ಅವಲಂಬಿಸಿವೆ. ಮಳೆ, ಗಾಳಿ, ಬಿಸಿಲು, ನೆರಳು ಇರುವಂತೆ ಸುಖ, ದುಃಖ, ನೋವು, ನಲಿವು, ಅಳು, ನಗು ಇದ್ದದ್ದೆ. ಎಲ್ಲಾ ಸಸ್ಯರಾಶಿಗೆ ಮೂಲ ಮಣ್ಣು ಅಲ್ಲವಾ? ಮಣ್ಣಿಲ್ಲದೇ ಏನೂ ಬೆಳೆಯಲಾಗದು. ಈ ಮಣ್ಣು ಗುಲಾಬಿಗೂ ಆಶ್ರಯ ಕೊಡುತ್ತೆ, ಕಳ್ಳಿ–ಕಸ–ಕಡ್ಡಿಗೂ ಆಶ್ರಯ ಕೊಡುತ್ತೆ. ನಮಗೆ ಸಿಹಿ ಬೇಕು ಕಹಿ ಬೇಡ ಅಂದರೆ? ಬೇವು ಬೇಡ ಬೆಲ್ಲ ಸಾಕು ಅಂದರೆ? ಮಳೆ ಬೇಕು ಬರಗಾಲ ಬೇಡ ಅಂದರೆ? ಅನ್ನುತ್ತಾ ದ್ವಾರಕೀಶನ ಕಡೆ ನೋಡಿದರು.

'ಮಣ್ಣು ಅಮ್ಮ ಇದ್ದಂತೆ. ಎಲ್ಲರನ್ನೂ ತಬ್ಬಿಕೊಳ್ಳುತ್ತೆ. ನಮಗೇನು ಬೇಕೋ ಅದನ್ನು ಪರಿಸರದಿಂದ ನಾವು ತೆಗೆದುಕೊಳ್ಳಬೇಕು, ನಮಗೆ ಬೇಡವಾದದ್ದು ಬೇರೊಬ್ಬರಿಗೆ ಬೇಕಾಗಹುದು ಅಲ್ಲವಾ?' ಅಂದಾಗ

'ಎಸ್ ಮಿಸ್' ಅಂದರು ಮಕ್ಕಳು ಜೋರಾಗಿ!

ಈಗ ಹೇಳಿ 'ಕಷ್ಟ ಬೇಕಾ ಸುಖ ಬೇಕಾ'

'ಎರಡೂ' ಅಂದರು ಮಕ್ಕಳು. ನಗು ಬೇಕಾ ಅಳು ಬೇಕಾ?

'ಎರಡೂ'

ಮಳೆಗಾಲ ಬೇಕಾ ಬೇಸಿಗೆ ಕಾಲ ಬೇಕಾ?

'ಎರಡೂ' ಮಕ್ಕಳ ದನಿ.

ಮಕ್ಕಳೇ ನಂಬಿಕೆ ಇಡಬೇಕು. ಫಲಿತಾಂಶದಲ್ಲಿ ಮತ್ತು ಜೀವನದಲ್ಲಿ. 'ನಂಬಿ ಕೆಟ್ಟವರಿಲ್ಲವೋ' ಅಂದಿದ್ದಾರೆ ದಾಸರು. ಬಿತ್ತಿದ ತಕ್ಷಣ ಬೆಳೆ ಬರದು, ನಾವು ಬಿತ್ತಿದ್ದಕ್ಕೇ ಮಳೆ ಬಾರದು. ನಂಬಿಕೆ ಮತ್ತು ಸಹನೆ ನಮ್ಮ ಶಕ್ತಿಯಾದಾಗ ಫಲ ಸಿಗುತ್ತೆ ಅಂದಾಗ ಮಕ್ಕಳು ಚಪ್ಪಾಳೆ ಹೊಡೆದರು.

ಅವತ್ತು ಇಡೀ ದಿನ ದ್ವಾರಕೀಶ್ ಖುಷಿಯಿಂದ ಮನೆಗೆ ನಗುತ್ತಾ ಬಂದ. ಅಮ್ಮ ಅವನ ಖುಷಿಗೆ ಕಾರಣ ಕೇಳಲಿಲ್ಲ. ಅವನು ಶಾಲೆಗೆ ಹೋದ ನಂತರ ತಾನು ಮಧುರ ಮಿಸ್ ಭೇಟಿಯಾಗಿದ್ದನ್ನು ಹೇಳಲಿಲ್ಲ. ಶಾಲೆ ಕೆಲಸ ಮುಗಿಸಿ ಹೆತ್ತವರೊಂದಿಗೆ ಊಟ ಮಾಡಿ ಅಪ್ಪನ ತಬ್ಬಿ ಮಲಗಿದ. ಅವನ ಮನದಲ್ಲಿ ಮಧುರ ಮಿಸ್ ಹೇಳಿದ ನಂಬಿಕೆಯೇ ಜೀವನ ಎಂಬ ಮಾತು ಇನ್ನೂ ಕೇಳುತ್ತಿತ್ತು. ಅದ್ಯಾವಾಗ ನಿದ್ದೆ ಹತ್ತಿತೋ, ಬೆಳಗಾದಾಗ ಇಡೀ ಹಟ್ಟಿಯೇ ತೋಯ್ದ ಗುಬ್ಬಿಯಂತೆ ಹಸಿಯಾಗಿತ್ತು; ಕಾಣದ ಮಾಯೆಯೋ ಇಡೀ ರಾತ್ರಿ ಮಳೆ ಸುರಿದಿತ್ತು! ನಂಬಿಕೆ ಫಲ ಕೊಟ್ಟಿತ್ತು. ■



# ಬಾರೆ ಚುಕ್ಕಿ ಬೆಳ್ಳಿ ಚುಕ್ಕಿ

■ **ಸೋಮಲಿಂಗ ಬೇಡರ ಆಳೂರ**

ಕಲೆ: ಸಂತೋಷ್ ಸಸಿಹಿತ್ಲು

ಬಾರೆ ಚುಕ್ಕಿ
ಬೆಳ್ಳಿ ಚುಕ್ಕಿ
ಕೊಡುವೆ ತುಪ್ಪ
ಜೇನು ತುಪ್ಪ

ಬಾರೆ ಪಕ್ಕ
ಕೊಡುವೆ ರೊಕ್ಕ
ಮಾಡ್ದೆ ಸಪ್ಪ
ತಿನ್ನು ಹಪ್ಪ

ಬಾರೆ ಡುಮ್ಮಿ
ಬಿಟ್ಟು ಜಿಮ್ಮಿ
ಕೊಡುವೆ ಗಿಣ್ಣ
ಆಗು ಸಣ್ಣ

ಬಾರೆ ಹತ್ರ
ಬಿಡಿಸು ಚಿತ್ರ
ಕೊಡುವೆ ಸಕ್ರೆ
ನೀನು ನಕ್ರೆ

ಬಾರೆ ಬಗ್ಗಿ
ಆಡಿ ಪಿಗ್ಗಿ
ಕೊಡುವೆ ಹುಗ್ಗಿ
ತಿನ್ನು ಹಿಗ್ಗಿ

ಬಾರೆ ಪುಟ್ಟಿ
ಕೊಡುವೆ ತಟ್ಟಿ
ತಿನ್ನು ರೊಟ್ಟಿ
ಆಗು ಗಟ್ಟಿ

ಬಾರೆ ಪೆದ್ದಿ
ತೀಡಿ ತಿದ್ದಿ
ಕೊಡುವೆ ಮುದ್ದಿ
ಮಾಡು ನಿದ್ದಿ!

ಬಾರೆ ಚುಕ್ಕಿ
ಬೆಳ್ಳಿ ಚುಕ್ಕಿ
ಏಕೆ ನಕ್ಕೆ?
ನಿನಗೆ ಸೊಕ್ಕೆ! ■

